**ಓ.ಎಸ್. ನಂಬರಃ 36/2021**

**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 04-04-2025)**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಜೆ ಡಿ ಎನ್ ವಕೀಲರಿಂದ,**

ನನ್ನ ಕಳೆದ ಪಾಟೀ ಸವಾಲಿನಲ್ಲಿ ಕಬ್ಜಾ ರಶೀದಿ ನಮ್ಮ ಬಳಿ ಇದೆ ಎಂದು ಹೇಳಿದ್ದು ಅದನ್ನು ಈ ದಿನ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಸದ್ರಿ ರಶೀದಿ ಹುಡುಕಿದ್ದರೂ ಸಿಕ್ಕಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸದ್ರಿ ಕಬ್ಜಾ ರಶೀದಿಯನ್ನು ನ್ಯಾಯಾಲಯದಿಂದ ನೀಡಲಾಗಿರುತ್ತದೆ. ನ್ಯಾಯಾಲಯದಿಂದ ಸದ್ರಿ ಕಬ್ಜಾ ರಶೀದಿಯ ಧೃಡಿಕೃತ ನಕಲನ್ನು ಪಡೆದುಕೊಳ್ಳಲು ನಾನು ಪ್ರಯತ್ನಪಟ್ಟಿರುವುದಿಲ್ಲ. ಕಬ್ಜಾ ರಶೀದಿಯನ್ನು ನ್ಯಾಯಾಲಯವು ನನ್ನ ತಂದೆಯವರಿಗೆ

ನೀಡಿರುತ್ತದೆ. ನನ್ನ ತಂದೆಯವರಿಗೆ ನ್ಯಾಯಾಲಯದಿಂದ ಯಾವುದೇ ಕಬ್ಜಾ ರಶೀದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

2. ದಾವಾ ಆಸ್ತಿಯು ಪ್ರತಿವಾದಿ ಮತ್ತು ಶನಿಯಾರ ಗೋವಿಂದಪ್ಪ ನಾಯ್ಕರವರ ಸಮಾಯಿಕ ಆಸ್ತಿ ಎಂದರೆ ಸರಿ. ಆದ್ದರಿಂದ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಅರ್ಧ ಅಂಶ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ, ಶನಿಯಾರ ಗೋವಿಂದಪ್ಪ ನಾಯ್ಕ ಮತ್ತು ಪ್ರತಿವಾದಿ ಇಬ್ಬರೂ ಸಾಲ ಮಾಡಿ ಆಸ್ತಿಯು ನ್ಯಾಯಾಲಯದಿಂದ ಹರಾಜು ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಹೇಳುವಂತಹ ಸಾಲವು ಜಂಟಿ ಸಾಲ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯವು ದಾವಾ ಆಸ್ತಿಯಲ್ಲಿ ಪ್ರತಿವಾದಿಗೆ ಸೇರಿದ ಜಮೀನಿನ ಕಬ್ಜಾವನ್ನು ನಮಗೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಪೂರ್ತಿ 17 ಗುಂಟೆ ಜಾಗದ ಕಬ್ಜಾವನ್ನು ಕೊಟ್ಟಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನಗಾಗಲೀ ಅಥವಾ ನನ್ನ ತಂದೆಯವರಿಗಾಗಲೀ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗೆ ಸದ್ರಿ ಆಸ್ತಿಯ ಕಬ್ಜಾ ನಮ್ಮ ಬಳಿ ಇರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ ಅಕ್ರಮ ಲಾಭ ಪಡೆಯುವ ಉದ್ದೇಶಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜನತಾ ಕೋ ಅಪರೇಟಿವ್ ಸೊಸೈಟಿಗೆ ಪ್ರತಿವಾದಿಗೆ ಸೇರಿದ ದಾವಾ ಆಸ್ತಿಯ ಹಕ್ಕನ್ನು ಅಡಮಾನ ಇಡದೇ ಇರುವುದರಿಂದ ಆತನ ಪಾಲಿನ ದಾವಾ ಆಸ್ತಿಯ ಹಕ್ಕು ಹರಾಜು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**